ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ: ಸಿ5(3) ಟಿಎಪಿ 5/2009-10 ದಿನಾಂಕ : 16-01-2010

2009-10ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮದಡಿ ರಾಜ್ಯದ 19 ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಇ-ವಾಹಿನಿ ಅಳವಡಿಕೆಗೆ ಕಂಪ್ಯೂಟರ್ , ಸರ್ವರ್ ಖರೀದಿಗೆ ಟೆಂಡರ್ ದಿನಾಂಕ: 12-01-2010 ಪೂರ್ವಾಹ್ನ 11-30ಕ್ಕೆ ನಡೆದ ಪ್ರೀ-ಬಿಡ್ ಸಭೆಯ ನಡಾವಳಿಗಳು

**ಹಾಜರಿದ್ದ ಇಲಾಖಾ ಅಧಿಕಾರಿಗಳು**

1. ಶ್ರೀ ಕೆ.ಕೃಷ್ಣೇಗೌಡ, ಜಂಟಿ ನಿರ್ದೇಶಕರು[ಆಡಳಿತ]
2. ಶ್ರೀಮತಿ ಕೆ.ಬಿ.ಶಶಿಕಲ, ಸಹಾಯಕ ನಿರ್ದೇಶಕರು[ಇ-ಆಡಳಿತ]
3. ಶ್ರೀ ಎಂ.ಚಂದ್ರಯ್ಯ, ಸಹಾಯಕ ನಿರ್ದೇಶಕರು[ಆಡಳಿತ]
4. ಶ್ರೀ ಮಿರ್ಜಾ ಕಲೀಮುಲ್ಲ, ಅಧೀಕ್ಷಕರು, ಕಛೇರಿ ಸಿಬ್ಬಂದಿ ಶಾಖೆ

**ಹಾಜರಿದ್ದ ಟೆಂಡರ್‌ದಾರರ ಪ್ರತಿನಿಧಿಗಳು**

1. ಶ್ರೀ ಸಂತೋಷ್ ಕುಮಾರ್, ಹೆಚ್.ಸಿ.ಎಲ್ ಇನ್ಫೋಸಿಸ್ಟಂಸ್ ಲಿಮಿಟೆಡ್
2. ಶ್ರೀ ಮೊಹಮದ್ ಹುಸೇನ್, ಸಫಾಸ್ ಇಂಟರ್‌ನೆಟ್‌ವರ್ಕಿಂಗ್ ಟೆಕ್ನಾಲಜೀಸ್ ಪ್ರೈ ಲಿ,
3. ಶ್ರೀ ಶ್ರೀಹರಿ, ಮತ್ತು ಶ್ವೇತ, ಏಸರ್ ಇಂಡಿಯಾ ಪ್ರೈ ಲಿ
4. ಶ್ರೀ ವಾಮನ್ ಪಿ ಅಶ್ರಿತ್, ಆರ್.ಪಿ ಇನ್ಫೋಸಿಸ್ಟಂಸ್ ಪ್ರೈ ಲಿ
5. ಶ್ರೀ ಶಾಂತಾರಾಮ್, ಕ್ಯಾನರಿಸ್ ಆಟೋಮೇಷನ್ ಪ್ರೈ ಲಿ
6. ಶ್ರೀ ಲಕ್ಷ್ಮೀರಾಜ್ ಮತ್ತು ಪರ್ವೀಜ್, ವಿಪ್ರೋ ಇನ್ಫೋಟೆಕ್
7. ಶ್ರೀ ಕೆ.ಶ್ರೀನಿವಾಸ್, ರೆಲಿಗೇರ್ ಟೆಕ್ನಾಲಜೀಸ್ ಸರ್ವಿಸ್ ಲಿ,
8. ಶ್ರೀ ಕಾರ್ತಿಕ್ ಎಸ್, ಇಂಟೆಲ್ ಲಿ, ಏರ್‌ಪೋರ್ಟ್ ರಸ್ತೆ
9. ಶ್ರೀ ಎನ್.ಮಹೇಸ್ ಮತ್ತು ವಿಜಯ್‌ಕುಮಾರ್, ಜೆಮ್‌ನೆಟ್ ಇನ್ಫೋಸಿಸ್ಟಂಸ್
10. ಯುನಿಕ್ ಡಿವೈಸಸ್ ಸಂಸ್ಥೆಯ ಪ್ರತಿನಿಧಿ
11. ಶ್ರೀ ಎಸ್.ರವಿಕುಮಾರ್, ಫ್ಯೂಚರ್ ಬ್ಯುಸಿನೆಸ್‌ಟೆಕ್ ಇಂ ಪ್ರೈ ಲಿ

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಕೆ.ಕೃಷ್ಣೇಗೌಡ ರವರು ಟೆಂಡರ್‌ದಾರರನ್ನು /ಸಂಸ್ಥೆಯ ಪ್ರತಿನಿಧಿಗಳಿಗೆ ಸ್ವಾಗತ ಕೋರಿ ಅವರನ್ನು ಉದ್ದೇಶಿಸಿ ಮಾತನಾಡುತ್ತಾ, ಸರ್ಕಾರದ ಧ್ಯೇಯೋದ್ದೇಶಗಳನ್ನು ಸ್ಪಷ್ಟಪಡಿಸಿ ಪ್ರಸಕ್ತ ಸಾಲಿನಲ್ಲಿ ಸುಮಾರು 345 ಕಂಪ್ಯೂಟರ್ ಮತ್ತು 19 ಸರ್ವರ್‌ಗಳನ್ನು ಖರೀದಿಸಲು, ಟೆಂಡರನ್ನು ಕರೆಯಲಾಗಿದೆ. ದಸ್ತಾವೇಜಿನಲ್ಲಿ ಏನಾದರೂ ಸ್ಪಷ್ಟೀಕರಣ ಬೇಕಿದ್ದಲ್ಲಿ ತಿಳಿಸಲು ಬಿಡ್‌ದಾರರು/ಪ್ರತಿನಿಧಿಯವರಿಗೆ ಸೂಚಿಸಿದರು.

1. ಬಿಡ್‌ದಾರರು ದಸ್ತಾವೇಜಿನ ಪುಟ ಸಂಖ್ಯೆ: 06 ರಲ್ಲಿನ ಪ್ಯಾರಾ 2.14 ರಲ್ಲಿರುವ ಕನಿಷ್ಟ 5 ವರ್ಷ ಅನುಭವವಿರಬೇಕೆಂಬ ಅಂಶವನ್ನು ಸಡಿಲಿಸಲು ಕೋರಿದರು.

   ಈ ಬಗ್ಗೆ ಸ್ಪಷ್ಟೀಕರಣ ನೀಡಿ, ಟೆಂಡರ್ ಡಾಕ್ಯುಮೆಂಟ್‌ನಲ್ಲಿರುವ 5 ವರ್ಷ ಅವಧಿಯ ಅನುಭವವನ್ನು ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು.

2. ಪುಟ ಸಂಖ್ಯೆ: 6ರಲ್ಲಿ ವಾರಂಟಿ ಮೊತ್ತ ಟೆಂಡರ್ ಮೊತ್ತಕ್ಕೆ ವಾರ್ಷಿಕ ಶೇ 5ರಂತೆ 3 ವರ್ಷಕ್ಕೆ ಶೇ.15ರಷ್ಟು ಬ್ಯಾಂಕ್ ವಾರಂಟಿ ನೀಡಬೇಕು ಎಂದಿರುವುದರ ಬಗ್ಗೆ ಸ್ಪಷ್ಟೀಕರಣ ಕೋರಿದರು. ಹಾಗೂ ಬೇರೆ ಕಡೆ ಮೂರು ವರ್ಷಕ್ಕೆ 10% ಬ್ಯಾಂಕ್ ವಾರಂಟಿ ಪಡೆದಿರುವಂತೆ ಈ ಬಿಡ್‌ನಲ್ಲಿಯೂ ಸಹ ಮಾರ್ಪಡಿಸಲು ಕೋರಿದರು.

   ಯಶಸ್ವಿ ಬಿಡ್‌ದಾರರು, ಟೆಂಡರ್ ಮೊತ್ತದ ವಾರ್ಷಿಕ 5% ನಂತೆ, 3 ವರ್ಷಗಳಿಗೆ ಮೂರು ಪ್ರತ್ಯೇಕ ಬ್ಯಾಂಕ್ ಗ್ಯಾರಂಟಿ ಒದಗಿಸಿದಲ್ಲಿ, ವಾರಂಟಿ ಅವಧಿ ಮುಗಿದಂತೆ ಸಂಸ್ಥೆಗೆ

ಬ್ಯಾಂಕ್ ವಾರಂಟಿ ಹಿಂದಿರುಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸುತ್ತಾ, ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ವಾರಂಟಿ ಮೊತ್ತವನ್ನು ಕಡಿಮೆಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು.

೩. ಪುಟ ಸಂಖ್ಯೆ: ೯ ರಲ್ಲಿರುವ "80% of the contract value will be released within 15 days of supply, and installation" ಎಂದಿರುವುದನ್ನು ಮಾರ್ಪಡಿಸಿ, ಸಾಮಗ್ರಿಗಳನ್ನು ಸರಬರಾಜು ಮಾಡಿದ ಕೂಡಲೇ ೮೦% ಮೊತ್ತ ಬಿಡುಗಡೆ ಮಾಡಲು, ಹಾಗೂ ಒದಗಿಸಿದ ಸಾಮಗ್ರಿಗಳ ಸ್ಥಾಪನೆ ಸಂಯೋಜನೆ ಮತ್ತು ಕಾರ್ಯಾಚರಣೆ ನಂತರ ಉಳಿದ ೨೦% ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೋರಿದರು.

ಈ ವಿಚಾರದಲ್ಲಿ ಯಾವುದೇ ಮಾರ್ಪಾಡು ಮಾಡಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು.

4. ಪುಟ ಸಂಖ್ಯೆ: ೮ರಲ್ಲಿನ ಪ್ಯಾರಾ ಸಂಖ್ಯೆ: ೩.೨ ರಲ್ಲಿನ "ಟಿ.ಎ.ಪಿ" ಅನುಮೋದಿತ ಸ್ಪೆಸಿಫಿಕೇಷನ್‌ನಲ್ಲಿನ ಈ ಕೆಳಕಂಡ ಅಂಶಗಳನ್ನು ಈಗಿನ ಮಾರುಕಟ್ಟೆ ಲಭ್ಯತೆಯನುಸಾರ ಮಾರ್ಪಡಿಸಲು ಕೋರಿರುತ್ತಾರೆ.

| Description | Existing Criteria / Specification | Changes needed | Remarks |
|---|---|---|---|
| CPU | Intel Xeon E**3220** Dual Core Processor | Intel Xeon E**3120** Dual Core Processor | Intel 3220 is QUAD CORE, hence 3120 dual core to be considered |
| Monitor | 17" TFT Monitor | 19" TFT Monitor | In market 17" monitor is not available, hence 19" to be considered |
| Operationg system | Windows 2008 Server Enterprise Edition [Academic version] | Windows 2008 Server Standard Edition with preloaded [Standard version with 15 CALS licence per server] licences should be in the name of "**Commissioner for Public Instruction**" | In each DDPIs' office we are providing 15 computers, hence 15 CALS licence per server to be recomended |
| Preloaded Software | Norton, McAfee, ETrust of equivalent Antivirus [latest software Version] with 1 year subscription | With 3 year subscription one media and paper licence. licences should be in the name of "**Commissioner for Public Instruction**" | Since warranty is for 3 years, 3 years subscription of antivirus to be considered |
| MS Office | MS Office software with one media and paper licence | MS Office 2007 Standard [INDIC] with one media and paper licence. licences should be in the name of "**Commissioner for Public Instruction**" | MS Office 2007 Standard [INDIC] will support Kannada language, hence may be considered |

[ಟಿ.ಎ.ಹರೀಶ್ ಗೌಡ]
ಆಯುಕ್ತರು
16/1/2010
16/1/10